ಸರಿಯಿತು. ಕೆಲವೊಮ್ಮೆ ಮಹಿಳೆಯರಿಗಿಂತ ಹೆಚ್ಚು, ಇನ್ನೂ ಕೆಲವೊಮ್ಮೆ ಮಹಿಳೆಯರಷ್ಟೇ ಫ್ಯಾಷನ್ ಆಯ್ಕೆಗಳು ಪುರುಷರಿಗೂ ಲಭ್ಯವಿದೆ. ಜತೆಗೆ ಫ್ಯಾಷನ್ ಜಗತ್ತಿನಲ್ಲಿ ಪುರುಷರ ಫ್ಯಾಷನ್ ಟ್ರೆಂಡ್ ಬದಲಾಗುತ್ತಲೂ ಇರುತ್ತವೆ ಎಂಬುದಂತೂ ಸತ್ಯ.

## ಏನಿದು ಆ್ಯಂಕಲ್ ಲೆಂತ್ ಪ್ಯಾಂಟ್?

ಇದೊಂದು ಪುರುಷರ ಹೊಸ ಫ್ಯಾಷನ್ ಟ್ರೆಂಡ್. ಆ್ಯಂಕಲ್ ಲೆಂತ್ ಪ್ಯಾಂಟ್ ಮೇಲ್ನೋಟಕ್ಕೆ ಪೆನ್ಸಿಲ್ ಕಟ್ ಪ್ಯಾಂಟ್‌ನಂತೆ ಇದೆ. ಇದು ಪಾದದ ಕೀಲಿನ ಭಾಗಕ್ಕಿಂತ ಸ್ವಲ್ಪ ಮೇಲೆ ಇರುತ್ತವೆ. ಬರ್ಮುಡಾಕ್ಕಿಂತಲೂ ಉದ್ದದ ಮತ್ತು ಎಲ್ಲ ಪುರುಷರು ಧರಿಸುವ ಫಾರ್ಮಲ್ ಪ್ಯಾಂಟ್ (ಸಾಧಾರಣ ಪ್ಯಾಂಟ್)ಗಿಂತಲೂ ಸ್ವಲ್ಪ ಗಿಡ್ಡದ ಈ ಪ್ಯಾಂಟ್‌ಗಳು ಇತ್ತೀಚೆಗೆ ಪುರುಷರ ಫ್ಯಾಷನ್ ಜಗತ್ತಿನಲ್ಲಿ ಹೊಸ ಭರವಸೆ ಹಾಗೂ ಟ್ರೆಂಡ್ ಸೃಷ್ಟಿಸಿದೆ..

ಹಾಗೆ ನೋಡಿದರೆ ಆ್ಯಂಕಲ್ ಲೆನ್ಸ್ ಪ್ಯಾಂಟ್ ಜೀನ್ಸ್, ಡೆನಿಮ್‌ಗಳಲ್ಲಿ ಮೊದಲೂ ದೊರೆಯುತ್ತಿತ್ತು. ಇದನ್ನು ಪುರುಷರು ಇಷ್ಟಪಟ್ಟು ಧರಿಸುತ್ತಿದ್ದರು. ಯುವಕರ ಫ್ಯಾಷನ್ ಬೇಡಿಕೆ ಹೆಚ್ಚಾದಂತೆ ಫ್ಯಾಷನ್ ಉಡುಪು ವಿನ್ಯಾಸಕಾರರು ಫಾರ್ಮಲ್ ಪ್ಯಾಂಟ್‌ನಲ್ಲೂ ಇದೇ ವಿನ್ಯಾಸ ತರಲಾರಂಭಿಸಿದರು. ಈಗ ಕಾಟನ್, ಜೀನ್ಸ್, ಡೆನಿಮ್, ಲಿನಿನ್ ಬಟ್ಟೆಗಳಲ್ಲೂ ಆ್ಯಂಕಲ್ ಲೆಂತ್ ಪ್ಯಾಂಟ್‌ಗಳು ಲಭ್ಯ. ಬಣ್ಣಗಳಲ್ಲೂ ಸಾಕಷ್ಟು ಆಯ್ಕೆ ಇದೆ. ಹೀಗಾಗಿ ಯಾವ ಗಾತ್ರ, ಬಣ್ಣದವರಿಗೂ ಈ ಪ್ಯಾಂಟ್ ಹೊಂದಿಕೆ ಆಗುತ್ತದೆ. ಜತೆಗೆ ಎಲ್ಲ ರೀತಿಯ ಶರ್ಟ್, ಟೀ ಶರ್ಟ್ ಜತೆಗೂ ಈ ಪ್ಯಾಂಟ್ ಅನ್ನು ಧರಿಸಬಹುದು ಎನ್ನುತ್ತಾರೆ ಫ್ಯಾಷನ್ ತಜ್ಞರು.

ಫ್ಯಾಷನ್‌ಪ್ರಿಯ ಯುವಕರೂ ಇದನ್ನೇ ಆಯ್ದುಕೊಂಡರು. ಇಟಾಲಿಯನ್ ಸ್ಟೈಲ್ ಎಂದು ಕರೆಯಲಾಗುವ ಆ್ಯಂಕಲ್ ಲೆಂತ್ ಪ್ಯಾಂಟ್ ಪುರುಷರನ್ನು ಆಕರ್ಷಿಸಿದ್ದಲ್ಲದೆ ಕಾಲೇಜು ಹುಡುಗರಿಂದ ಹಿಡಿದು ಉದ್ಯೋಗಸ್ಥ ಪುರುಷರಿಗೂ ಇದು ಮೆಚ್ಚು ಎನಿಸಿದೆ. ಆ್ಯಂಕಲ್ ಲೆಂತ್ ಪ್ಯಾಂಟ್ ಮೇಲೆ ಶರ್ಟ್ ಧರಿಸಿ ಮೇಲೊಂದು ಕೋಟ್ ಅಥವಾ ಬ್ಲೇಜರ್ ಧರಿಸಿ ಫ್ಯಾಷನ್ ಮೆರೆಯುವ ಯುವಕರು ಹೆಚ್ಚಾಗಿದ್ದು ಫ್ಯಾಷನ್‌ಪ್ರಿಯರನ್ನು ಮೋಡಿ ಮಾಡಿದೆ.

ಮಹಿಳೆಯರಿರಲಿ ಪುರುಷರೇ ಇರಲಿ. ಎಲ್ಲ ಫ್ಯಾಷನ್‌ಗೂ ರೋಲ್ ಮಾಡೆಲ್‌ಗಳು ಸಾಮಾನ್ಯವಾಗಿ ಹಿಂದಿ ಅಥವಾ ಕನ್ನಡ ಸಿನಿಮಾ ತಾರೆಯರು, ಮೆಚ್ಚಿನ ಕ್ರಿಕೆಟ್ ಪಟುಗಳೇ ಆಗಿರುತ್ತಾರೆ. ನಟ ಸಿದ್ದಾರ್ಥ್ ಕಪೂರ್, ಧವಲ್ ಕುಲಕರ್ಣಿ ಕ್ರಿಕೆಟ್ ಪಟು ವಿರಾಟ್ ಕೊಹ್ಲಿ.. ಎಲ್ಲರೂ ಆ್ಯಂಕಲ್ ಲೆಂತ್ ಪ್ಯಾಂಟ್ ಧರಿಸುತ್ತಿರುವವರಿಗೆ ಯುವಜನರಿಗೆ ಮಾದರಿ ಎನಿಸಿದೆ.

ಆ್ಯಂಕಲ್ ಲೆಂತ್ ಪ್ಯಾಂಟ್‌ನ ಜನಪ್ರಿಯತೆ ಹಾಗೂ ಎಲ್ಲ ಯುವಕರು ಇದನ್ನು ಧರಿಸಿಕೊಂಡು ಸ್ಟೈಲಿಷ್ ಆಗಿ ಮೆರೆಯುತ್ತಿರುವುದನ್ನು ಕಂಡ ಸಾಮಾನ್ಯ ಯುವಕರು ಇಂದು ತಮ್ಮ ಸಾಮಾನ್ಯ (ಫಾರ್ಮಲ್ ಪ್ಯಾಂಟ್) ಪ್ಯಾಂಟ್ ಅನ್ನೂ ಮಡಿಚಿ ಆ್ಯಂಕಲ್ ಲೆಂತ್ ಆಗಿ ಮಾರ್ಪಡಿಸಿ ಧರಿಸುವುದು ಕಾಣುತ್ತಿದೆ. ಕಾರಣ ಈ ರೀತಿಯ ಪ್ಯಾಂಟ್ ಸಾಮಾನ್ಯ ಜನರಿಗೂ ಒಪ್ಪುತ್ತದೆ, ಚೆನ್ನಾಗಿಯೂ ಕಾಣುತ್ತದೆ. ಪ್ಯಾಂಟ್ ಯಾವುದೇ ಮಾದರಿಯಲ್ಲಿ ಇದ್ದರೂ ಇದನ್ನು ಆ್ಯಂಕಲ್ ಲೆಂತ್ ಆಗಿ ಬದಲಾಯಿಸಿಕೊಂಡು ಇಂದಿನ ಟ್ರೆಂಡ್‌ಗೆ ತಕ್ಕಂತೆ ಫ್ಯಾಷನ್ ಆಗಿ ಧರಿಸಿಕೊಳ್ಳುವವರು ಹೆಚ್ಚಾಗಿದ್ದಾರೆ. ಎಲ್ಲ ಉಡುಪು ಮಳಿಗೆಗಳಲ್ಲಿ ಆ್ಯಂಕಲ್ ಲೆಂತ್ ಪ್ಯಾಂಟ್ ಲಭ್ಯ. ಬೆಲೆ ಸಾವಿರ ರೂಪಾಯಿಯಿಂದ ಆರಂಭ.



ಬರೀ ಫ್ಯಾಷನ್ ಶೋಗಳಲ್ಲಿ ರ್‍ಯಾಂಪ್ ಮೇಲೆ ಮಾತ್ರ ಮಾಡೆಲಿಂಗ್ ತಾರೆಯರು ಆ್ಯಂಕಲ್ ಲೆಂತ್ ಪ್ಯಾಂಟ್ ಹಾಕಿ ಕ್ಯಾಟ್‌ವಾಕ್ ಮಾಡಿದರೆ ಅದು ನಿಜ ಪ್ರಪಂಚದಲ್ಲಿ ಫ್ಯಾಷನ್ ಆಗಿ ಉಳಿಯುವುದಿಲ್ಲ. ಜನ ತೊಟ್ಟುಕೊಳ್ಳುವುದಿಲ್ಲ. ಅವೆಲ್ಲ ಫ್ಯಾಷನ್‌ಶೋ ಗೆ ಮಾತ್ರ ಸೀಮಿತ ಎಂಬ ಮಾತನ್ನು ಈ ಆ್ಯಂಕಲ್‌ಲೆಂತ್ ಪ್ಯಾಂಟ್ ಹುಸಿಗೊಳಿಸಿದೆ.

